3. ಅಧ್ಯಕ್ಷರ ಅಪ್ಪಣೆ ಮೇರೆಗೆ

ವಿಷಯ : ಆಯವ್ಯಯದ ಮೇಲಿನ ಚರ್ಚೆಗೆ ಹೆಚ್ಚಿನ ಕಾಲಾವಕಾಶ ನೀಡುವ ಬಗ್ಗೆ

ಅಧ್ಯಕ್ಷರು : ಈಗ ವಿತ್ತೀಯ ಕಾರ್ಯಕಲಾಪಗಳು, ಮಾನ್ಯ ಡಿ.ಆರ್. ಪಾಟೀಲರೆ, ತಮಗೆ ಮಾತನಾಡಲು ಈಗಾಗಲೇ ಒಂದು ಗಂಟೆಗಳ ಕಾಲಾವಕಾಶವನ್ನು ಕೊಡಲಾಗಿದೆ. ತಾವು 5–10 ನಿಮಿಷದಲ್ಲಿ ಮುಗಿಸಬೇಕು. ಬಹಳ ಜನ ಸದಸ್ಯರುಗಳು ಮಾತನಾಡುವವರು ಇದ್ದಾರೆ. 2 ಗಂಟೆಗೆ ಮಾನ್ಯ ಸಚಿವರು ದಯಮಾಡಿ ಉತ್ತರವನ್ನು ನೀಡಬೇಕು. 2 ಗಂಟೆಯವರೆವಿಗೆ ಚರ್ಚೆ ನಡೆಯುತ್ತದೆ. ಆನಂತರ ನಿಮ್ಮ ಉತ್ತರ.

ಶ್ರೀ ಡಿ.ಆರ್. ಪಾಟೀಲ್ : ಇವತ್ತು ಎಪಿಎಂಸಿ ಒಳಗೆ ಆಡಳಿತಾಧಿಕಾರಿಗಳು ಇದ್ದಾರೆ.

ಶ್ರೀ ಕೆ. ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು 2 ಗಂಟೆಗೆ ಉತ್ತರವನ್ನು ಕೊಡಬೇಕೆಂದು ತಾವು ಹೇಳಿದ್ದೀರಿ. ಇದರ ಬಗ್ಗೆ ನನ್ನದೊಂದು ವಿನಂತಿ ಎಂದರೆ, ತಮಗೆ ಈಗಾಗಲೇ ಪಟ್ಟಿ ಕೊಟ್ಟಂತೆ ಸದಸ್ಯರುಗಳು ಸಾಕಷ್ಟು ಸಂಖ್ಯೆಯಲ್ಲಿ ಮಾತನಾಡುವುದಕ್ಕೆ ಬಯಸಿದ್ದಾರೆ. ಹೊಸ ಸದಸ್ಯರುಗಳು ಇದ್ದಾರೆ, ಅವರುಗಳೆಲ್ಲರೂ ಮೊದಲನೆಯ ಸಾರಿ ಆರಿಸಿ ಬಂದಿದ್ದಾರೆ. ತಮ್ಮ ಕ್ಷೇತ್ರದ ಬಗ್ಗೆ, ಜಿಲ್ಲೆಯ ಹಾಗೂ ರಾಜ್ಯದ ಬಗ್ಗೆ ಹಿತದೃಷ್ಟಿಯಿಂದ ಬಜೆಟ್‌ನಲ್ಲಿ ಅನೇಕ ಸಂಗತಿಗಳನ್ನು ಸೇರಿಸುವುದಕ್ಕೆ ಸಲಹೆಗಳನ್ನು ಕೊಡುವ ಬಗ್ಗೆ ಅವರುಗಳು ಸಿದ್ಧರಾಗಿದ್ದಾರೆ. ಹಾಗಾಗಿ ಅವರಿಗೆ 10–10 ನಿಮಿಷಗಳ ಕಾಲ ಪ್ರಸ್ತಾಪ ಮಾಡುವುದಕ್ಕೆ ಅವಕಾಶವನ್ನು ಮಾಡಿಕೊಡಬೇಕು. ಅವರು ಉತ್ತರ ಕೊಡುವುದಕ್ಕೆ 2 ಗಂಟೆಯಲ್ಲದೆ ಹೋದರೂ 4 ಗಂಟೆಯಾದರೂ ಕೂಡ ಅಡ್ಡಿಯಿಲ್ಲ. ಹೇಗೋ, ನಾಳೇ ಒಂದು ದಿವಸ ಕಾಲಾವಕಾಶವಿದೆ. ಆ ಹಿನ್ನೆಲೆ ಇದೆ.

ಅಧ್ಯಕ್ಷರು : ಅದಕ್ಕೋಸ್ಕರ ಲಂಚ್ ಬ್ರೇಕ್‌ನ್ನು ಇವತ್ತಿನದಿವಸ ಕೊಡುತ್ತಿಲ್ಲ. ದಯಮಾಡಿ 2 ಗಂಟೆಯವರೆವಿಗೂ ಹೆಚ್ಚಿನ ಸದಸ್ಯರುಗಳು ಮಾತನಾಡಬಹುದು. ಎರಡು ಗಂಟೆಯಾದ ಮೇಲೆ ಮಾನ್ಯ ಸಚಿವರು ಉತ್ತರವನ್ನು ಕೊಡುತ್ತಾರೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಈಗ ನಾವೆಲ್ಲರೂ ವಿರೋಧಪಕ್ಷದಲ್ಲಿ ಕೆಲಸ ಮಾಡಿರತಕ್ಕಂತಹವರಾಗಿದ್ದೇವೆ. ನಾವು ಏನು ಮಾಡುತ್ತಿದ್ದೇವೆಂದರೆ, ಇದರ ಬಗ್ಗೆ ಮಾನ್ಯ ಸದಸ್ಯರಾದ ಶ್ರೀ ಆರಗ ಜ್ಞಾನೇಂದ್ರರವರಿಗೆ ಗೊತ್ತಿದೆ. ಇಂತಹ ವಿಷಯಗಳ ಬಗ್ಗೆ you must remember, ನಾನು ಅಧಿಕೃತ ವಿರೋಧಪಕ್ಷದ ನಾಯಕನಾಗಿರಲಿಲ್ಲ. ಸಂಯುಕ್ತ ಜನತಾದಳದ ವಿರೋಧ ಪಕ್ಷದ ನಾಯಕನಾಗಿದ್ದೆ; ನಾನು ಪ್ಲೋರ್ ಲೀಡರ್ ಆಗಿದ್ದೆ. ಬಟ್ ರಾಜ್ಯಪಾಲರ ಭಾಷಣವಾಗಲಿ, ಬಜೆಟ್ ಭಾಷಣವಾಗಲಿ, 5 ವರ್ಷಗಳ ಅವಧಿಯಲ್ಲಿ ಒಂದು ಸಾರಿನಾನು ಇನ್‌ಷಿಯೇಟ್ ಮಾಡಿರಲಿಲ್ಲ. I had allowed all other members to initiate and all my party members to speak. ನೀವೆಲ್ಲರೂ ಫ್ರಂಟ್ ಬೆಂಚಿನಲ್ಲಿರುವವರು ಮಾತನಾಡಿಬಿಟ್ಟು ಹಿಂದಿನವರಿಗೆ ಏನೂ ಅವಕಾಶವನ್ನು ಕೊಡದೆ ಸಭಾಧ್ಯಕ್ಷರಿಗೆ ಕಂಪ್ಲೈಂಟ್ ಕೊಟ್ಟರೆ ಹೇಗೆ?

ಶ್ರೀ ಕೆ. ವಿಶ್ವೇಶ್ವರ ಹೆಗಡೆ ಕಾಗೇರಿ : ಈ ಕಡೆಯಿಂದ ಏನು ಮಾಡಬೇಕು ಎಂಬುದು ಎಂದು ನಮಗೆ ಗೊತ್ತಿದೆ. ಮಾನ್ಯ ಸಿಂಧ್ಯಾರವರು ವಿರೋಧಪಕ್ಷದ ಕಡೆ ಇದ್ದಾಗ ಅವರಿಂದ ಅನೇಕ ಸಂಗತಿಗಳನ್ನು ನಾವು ತಿಳಿದುಕೊಂಡಿದ್ದೇವೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೆ, ಈಗ ತಾವು ರೇಕಾರ್ಡ್ಸ್ ತೆಗೆಸಿ. ಮಾನ್ಯ ಸಿಂಧ್ಯಾರವರು ಹೋದ ಸದನದಲ್ಲಿ ಎಷ್ಟು ಗಂಟೆಗಳ ಕಾಲ ಮಾತನಾಡಿದ್ದಾರೆ ಆಮೇಲೆ ಚರ್ಚೆ ಮಾಡೋಣ.

ಅಧ್ಯಕ್ಷರು : ಆಯಿತು ಬಿಡಿ. ಅದರ ಬಗ್ಗೆ ಏಕೆ?

ಶ್ರೀ ಜೆ.ಸಿ. ಮಾಧುಸ್ವಾಮಿ : ಈ ತರಹದ ರಾಜಕಾರಣ ಬೇಡ. ದಾಖಲೆಗಳನ್ನು ತರಿಸಿ ಈ ಅಸೆಂಬ್ಲಿಯಲ್ಲಿ ಎಷ್ಟು ಮಾತನಾಡಿದ್ದಾರೆ ಗೊತ್ತಾಗುತ್ತದೆ.

ಅಧ್ಯಕ್ಷರು : ಅದರ ಬಗ್ಗೆ ಚರ್ಚೆ ಅನಗತ್ಯ,

ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಅಧ್ಯಕ್ಷರೆ, ಆಡಳಿತ ಪಕ್ಷದ ಸದಸ್ಯರು ಹೆಚ್ಚು ಹೊತ್ತು ಮಾತನಾಡುತ್ತಿರಲಿಲ್ಲ. ಇದು ಸಂಪ್ರದಾಯವಲ್ಲ, ನಿನ್ನೆ ದಿವಸ ಮಾನ್ಯ ಸದಸ್ಯರಾದ ಮಾಧುಸ್ವಾಮಿಯವರು ಹೇಳಿದರು. ಎಲ್ಲಾ ಒಟ್ಟು ಮಾಡಿ ಸಮಗ್ರವಾಗಿ ಸರ್ಕಾರ ಅವರ ಭಾವನೆಗಳನ್ನು ಇಲ್ಲಿ ವ್ಯಕ್ತ ಮಾಡುತ್ತಿದೆ. ಅದು ತಪ್ಪಿದೆಯೋ ಸರಿ ಇದೆಯೋ ಎಂಬ ಬಗ್ಗೆ ವಿಮರ್ಶೆ ಮಾಡುವಂತಹದ್ದು ವಿರೋಧಪಕ್ಷದಲ್ಲಿ ಕುಳಿತುಕೊಂಡು ಹೇಳುವುದು ನಮ್ಮ ಕರ್ತವ್ಯವಾಗಿದೆ. ನಾವು ಹೆಚ್ಚು ಮಾತನಾಡುವುದಕ್ಕೆ ತಾವು ಅವಕಾಶ ಕೊಡಬೇಕಾಗಿತ್ತು. ನಮ್ಮ ಹಣೆಬರಹಕ್ಕೆ 79 ಜನ ಶಾಸಕರುಗಳು ಕುಳಿತುಕೊಂಡರೂ ಕೂಡ..

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ.....

ಶ್ರೀ ಆರಗ ಜ್ಞಾನೇಂದ್ರ : ಮಾನ್ಯ ಎಸ್.ಎಸ್. ಪಾಟೀಲರವರು ಇಲ್ಲಿ ಇದ್ದಾಗಲೂ ಅಷ್ಟೇ ಮಾತನಾಡುತ್ತಿದ್ದರು. ಅಲ್ಲಿ ಹೋದರೂ ಕೂಡ ಅವರು ಅಷ್ಟೇ ಮಾತನಾಡುತ್ತಿದ್ದಾರೆ. ಮಾನ್ಯ ಡಿ.ಆರ್. ಪಾಟೀಲ್‌ರವರದು ಹಾಗೆಯೇ. ನಮ್ಮ ಪರಿಸ್ಥಿತಿ ಹೇಗೇ ; ನಾವು 79 ಜನ ಶಾಸಕರನ್ನು ಇಟ್ಟುಕೊಂಡು ಕುಳಿತಿದ್ದೇವೆ. ಮಾನ್ಯ ಯಡಿಯೂರಪ್ಪನವರು ಒಬ್ಬರು ಮಾತನಾಡಿದ್ದು ಬಿಟ್ಟರೆ...

ಅಧ್ಯಕ್ಷರು : ನಿಮ್ಮವರು ಈಗಾಗಲೇ ಮೂರೂವರೆ ಗಂಟೆಗಳ ಕಾಲ ಮಾತನಾಡಿದ್ದಾರೆ.

ಗೊಂದಲ

ಅಧ್ಯಕ್ಷರು : ಈಗ ಅದರ ಬಗ್ಗೆ ವೃಥಾ ಚರ್ಚೆ ಏಕೇ? ಮಾನ್ಯ ಡಿ.ಆರ್. ಪಾಟೀಲ್‌ರವರೇ ತಾವು 5–10 ನಿಮಿಷದಲ್ಲಿ ತಾವು ಮುಗಿಸಬೇಕು. ಬಹಳ ಜನರು ಮಾತನಾಡಲು ತಾವು ಅವಕಾಶವನ್ನು ಮಾಡಿಕೊಡಬೇಕು.

ಶ್ರೀ ಡಿ.ಆರ್. ಪಾಟೀಲ್ : ಬೇಗನೆ ಮುಗಿಸುತ್ತೇನೆ ಸ್ವಾಮಿ.

10.40 ಎ.ಎಂ

4. ವಿತ್ತೀಯ ಕಾರ್ಯಕಲಾಪ

ಅ. 2004–05ನೇ ಸಾಲಿನ ಆಯವ್ಯಯದ ಮೇಲೆ ಮುಂದುವರೆದ ಸಾಮಾನ್ಯ ಚರ್ಚೆ

ಶ್ರೀ ಡಿ.ಆರ್. ಪಾಟೀಲ್ (ಗದಗ್) : ಮಾನ್ಯ ಅಧ್ಯಕ್ಷರೆ, ಎ.ಪಿ.ಎಂ.ಸಿ. ಯಲ್ಲಿ ಈ ಆಡಳಿತಾಧಿಕಾರಿಗಳು ಇದ್ದಾರೆ. ಆ ಶೋಷಣೆ ರಹಿತ ಮಾರುಕಟ್ಟೆ ಮಾಡಲಿಕ್ಕೆ ಕಾನೂನು ಏನ ಮಾಡಿದೆ ಈ ಸದನ. ಆ ಕಾನೂನು ಅನುಷ್ಠಾನಗೊಳಿಸುವಂಥ ಜವಾಬ್ದಾರಿ ಅವರದ್ದು. ದೊ ದೊಡ್ಡ ಮಾರುಕಟ್ಟೆಗಳಿಗಂತೂ ಡೆಪ್ಯೂಟಿ ಕಮೀಷನರುಗಳೇ ಚೇರ್ಮನ್. ದಯವಿಟ್ಟು ಅದ ಅನುಷ್ಠಾನಗೊಳಿಸುವುದಕ್ಕೆ ಕ್ರಮ ಕೈಗೊಳ್ಳಬೇಕು. ಹೋದಸಾರಿ ಹಿಂದಿನ ಜನತಾ ದಳ ಸರ್ಕಾ